


ಬಾವಲಿಗಳ ಜೀವಿತಾವಧಿ ಸಾಮಾನ್ಯವಾಗಿ 10ರಿಂದ 20 ವರ್ಷ. ಕೆಲವು ಬಾವಲಿಗಳು 5ರಿಂದ 8 ವರ್ಷ ಬದುಕಿದ್ದರೆ, ಸೂಕ್ತ ವಾತಾವರಣದಲ್ಲಿ ನೆಲೆಕಂಡುಕೊಂಡ ಬಾವಲಿಗಳು 30 ವರ್ಷದವರೆಗೂ ಬದುಕಬಲ್ಲವು. ಇವು ರಾತ್ರಿ ವೇಳೆ ಹೆಚ್ಚು ಸಕ್ರಿಯವಾಗಿರುವುದರಿಂದ ಈ ಸಮಯದಲ್ಲಿ ಶತ್ರುಗಳು ಕಡಿಮೆಯಿರುವುದು, ದೀರ್ಘ ಜೀವಿತಾವಧಿಗೆ ಕಾರಣವಾಗಿದೆ.

ಪಕ್ಷಿಗಳಂತೆ, ಬಾವಲಿಗಳಲ್ಲೂ ಕೆಲವು ಪ್ರಭೇದಗಳಲ್ಲಿ ವಲಸೆ ಪದ್ಧತಿ ಇದೆ. ಆಹಾರ, ಸೂಕ್ತ ವಸತಿ ಅರಸಿಕೊಂಡು ದೀರ್ಘ ಕಾಲ ವಲಸೆ ಹೋಗುವ ರೂಢಿ ಅನುಸರಿಸುತ್ತವೆ. ಅವುಗಳಲ್ಲಿ HOARY ಪ್ರಭೇದದ ಬಾವಲಿ ಸೇರಿದೆ. ಚಳಿಗಾಲದಲ್ಲಿ ದೇಹದ ಶಕ್ತಿ ಕಾಪಿಟ್ಟುಕೊಳ್ಳಲು ಹಾಗೂ ಶೀತ ಹವಾಮಾನದಲ್ಲಿ ಬದುಕುಳಿಯಲು, ಚಳಿಗಾಲದಲ್ಲಿ ದೀರ್ಘ ನಿದ್ದೆಗೆ ಜಾರುವುದೂ ಇದೆ.

ಸೊಳ್ಳೆ ಹಾಗೂ ಬೆಳೆಗಳಿಗೆ ಉಪದ್ರವ ಕೊಡುವ ಕೀಟಗಳನ್ನು ಭಕ್ಷಿಸುವುದರಿಂದ, 'ರೈತಸ್ನೇಹಿ' ಎಂಬ ಪಟ್ಟ ಬಾವಲಿಗಿದೆ.



ಬಾವಲಿಗಳಿಗೆ ಚುರುಕು ದೃಷ್ಟಿ ಇರುತ್ತದೆ. ಆದಾಗ್ಯೂ ಶಬ್ದಗಳಿಂದಲೇ ಅವು ಬೇಟೆಯ ಜಾಡು ಹಿಡಿಯುತ್ತವೆ. ಬಾವಲಿಗಳದ್ದು ಸೂಕ್ಷ್ಮ ಕಿವಿಗಳು. ಅವುಗಳ ಪ್ರತಿಫಲನ ಶಬ್ದಗ್ರಹಣ ಶಕ್ತಿ ಅಥವಾ ಗ್ರಹಣ ವ್ಯವಸ್ಥೆ (ಎಖೊಲೊಕೇಷನ್) ವಿಶೇಷವಾಗಿದೆ. ಇದರಿಂದ ತನ್ನ ಬೇಟೆಯನ್ನು ಸುಲಭವಾಗಿ ಗುರುತಿಸಬಲ್ಲದ್ದಾಗಿದೆ. ಎಖೊಲೊಕೇಷನ್ ಸಾಮರ್ಥ್ಯದಿಂದ ಯಾವುದೇ ಸಣ್ಣ ಕೀಟಗಳ ಶಬ್ದವನ್ನೂ ಸಂಪೂರ್ಣ ಕತ್ತಲೆಯಲ್ಲೂ ಸುಲಭವಾಗಿ ಪತ್ತೆ ಹಚ್ಚುತ್ತವೆ.



ಅಳಿವಿನ ಅಂಚಿನಲ್ಲಿರುವ 'ಬಂಬ್ಲಿಬೀ ಬ್ಯಾಟ್' ವಿಶ್ವದಲ್ಲೇ ಅತಿ ಸಣ್ಣ ಬಾವಲಿಯಾಗಿದೆ. ಇದು ಸಾಮಾನ್ಯವಾಗಿ 29ರಿಂದ 33 ಮಿ.ಮೀ. ಉದ್ದವಿರುತ್ತದೆ.



ಮಧ್ಯ ಹಾಗೂ ದಕ್ಷಿಣ ಅಮೆರಿಕದಲ್ಲಿ ಪ್ರಾಣಿಗಳ ರಕ್ತ ಕುಡಿಯುವ ಬಾವಲಿಗಳಿವೆ. ಅವನ್ನು 'ವ್ಯಾಂಪೈರ್ ಬ್ಯಾಟ್' ಎಂದು ಕರೆಯಲಾಗುತ್ತದೆ.

ಬಾವಲಿಗಳು ಗುಂಪಿನಲ್ಲಿ ವಾಸಿಸಲು ಇಷ್ಟಪಡುತ್ತವೆ. ಹೀಗೆ ವಾಸಿಸುವುದನ್ನು 'ಕಾಲೊನಿ' ಎಂದು ಕರೆಯಲಾಗುತ್ತದೆ. ಅವು ತಮಗಾಗಿ ಗೂಡು ಕಟ್ಟಿಕೊಳ್ಳುವುದಿಲ್ಲ. ತಮಗೆ ಸೂಕ್ತ ಜಾಗದಲ್ಲಿ ನೆಲೆ ಕಂಡುಕೊಳ್ಳುತ್ತವೆ. ಪಾಳುಬಿದ್ದ ಮನೆ, ಗುಹೆ, ಕೋಟೆಗಳು, ಕಲ್ಲುಬಂಡೆಗಳ ನಡುವೆ, ಕೊರಕಲು ಜಾಗಗಳಲ್ಲಿ ಪೊಟರೆ, ಒಣಗಿದ ಮರಗಳಲ್ಲಿ ಬದುಕುತ್ತವೆ.



- ಒಂದು ಬಾವಲಿ, ಒಂದು ಬಾರಿಗೆ ಒಂದು ಮರಿಗೆ ಮಾತ್ರ ಜನ್ಮ ನೀಡುತ್ತದೆ. ಆ ಮರಿಯು ತನಗೆ ಭಾರ ಎನಿಸುವವರೆಗೂ ತಾಯಿ ಬಾವಲಿ ಅದನ್ನು ಹೊತ್ತು ತಿರುಗುತ್ತದೆ.
- ಉತ್ತರ ಅಮೆರಿಕದಲ್ಲಿ 'ಸ್ಪಾಟೆಡ್ ಬ್ಯಾಟ್' ಬಾವಲಿಗೆ ಅತಿ ದೊಡ್ಡ ಕಿವಿಗಳಿದ್ದು, ನೋಡಲು ವಿಶೇಷವಾಗಿ ಕಾಣುತ್ತದೆ.
- ಕ್ಯಾಲಿಫೋರ್ನಿಯಾದ 'ಲೀಫ್ ನೋಸ್ಡ್ ಬ್ಯಾಟ್' ಬಾವಲಿಯ ಮೂಗು ಎಲೆಯ ಆಕಾರದಲ್ಲಿದ್ದು, ತನ್ನ ಮೂಗಿನಿಂದಲೇ ಯಾವುದೇ ವಸ್ತುವನ್ನು ತಿರುಗಿಸಬಲ್ಲ ಶಕ್ತಿ ಹೊಂದಿರುತ್ತದೆ.
- ಮೆಕ್ಸಿಕನ್ ಫ್ರೀ ಟೇಲ್ಡ್ ಬ್ಯಾಟ್ ವಿಶ್ವದಲ್ಲೇ ಅತಿ ವೇಗಿ ಬಾವಲಿ ಎಂದು ಕರೆಸಿಕೊಂಡಿದೆ.

ತನ್ನ ವೈಶಿಷ್ಟ್ಯದಿಂದಲೇ ಗುರುತಿಸಿಕೊಳ್ಳುವಂಥ ಇಂಥ ಇನ್ನಷ್ಟು ಬಾವಲಿಗಳು ಜಗತ್ತಿನಲ್ಲಿವೆ.